ಕೈಂಬಕ್ರಾಕ್ಸ್ ಸಬ್ ಡಿವೀಜ್ಞ.

ತಾರೀಖು 1ನೇ ಆಗಸ್ಟ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಈ ಕೆಳಗೆ ನಮೂದಿಸುವ ಸಬ್ ರಿಜಿಸ್ಟ್ರಿ ಆಫೀಸುಗಳಲ್ಲಿ ಜೇವಾರಸಾಗಿ ಇರತಕ್ಕ ಈ ಮುಂದೆ ವಿವರಿಸುವ ದಸ್ತಾವೇಜುಗಳನ್ನು ಹಾಜರ್‌ಮಾಡಿದವರೇ ಆಗಲಿ ಅಥವಾ ವಾಪಸುಪಡಿಯಲು ಅಧಿಕಾರ ಹೊಂದಿದ ಮುಖ್ತಾಲೀಕ ಯಾ ಹಕ್ಕುದಾರರೇ ಆಗಲಿ ಈ ನೋಟೀಸು ತಾರೀಖು ಲಾಗಾಯತು ಒಂದು ತಿಂಗಳಲ್ಲಿ ಸದರೀ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ವಾಪಸ್ ಪಡಿಯದೆ ತಪ್ಪಿದರೆ ರಿಜಿಸ್ಟ್ರೇಷನ್ ನಿಬಂಧನೆ ಪ್ರಕಾರ ಅವು ನಾಶಪಡಿಸಲ್ಪಡುವವು.

ಯಾವ ಸಬ್ ರಿಜಿಸ್ಟ್ರಿ ಆಫೀಸು.	ದಸ್ತಾವೇಜಿನ ನಂಬರ್.	ದಸ್ತಾವೇಜು ಬರದು ಕೊಟ್ಟವನ ಹೆಸರು ಮ ವಾಸಸ್ಥಳ.	ದಸ್ತಾವೇಜು ಬರಸಿ ಕೊಂಡವನ ಹೆಸರು ಮ ವಾಸಸ್ಥಳ.	ದಸ್ತಾವೇಜು ರಿಜಿಸ್ಟ್ರಿ ತಾರೀಖು.	ರಿಜಿಸ್ಟ್ರಿಯಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
ಅಚ್ಚಿಕುಪ್ಪಾ	43 / 1882—83	ನಳ್ಳೀನಹಳ್ಳಿ ಗ್ರಾಮದಲ್ಲಿ ಯಿರುವ ತಿರುಮಲನ ಹೆಂಡತಿ ಸುಡುಗಾಡಿ	ಚಿನಕುರಳಿ ಗ್ರಾಮದಲ್ಲಿ ಇರುವ ಕೊತ್ವಾಲ್ ರಾಮರಾಯ	25—4—82.	27—4—82	ನಳ್ಳೀನಹಳ್ಳಿ ಗ್ರಾಮದಲ್ಲಿ ಇರುವ ನಂಬರು 113—114ನೇ ಕಲ್ಲು ಹೊಲ, ನಂಬರು 128ನೇ ಅಡಿಕೆ ತೆಂಗಿನತೋಟದ ಪೈಕಿ ತನ್ನ ಹಿಸ್ಸೆಯನ್ನು 99 ರೂಪಾಯಿಗೆ ಕ್ರಯಕ್ಕೆ ಕೊಟ್ಟಿರುವದಾಗಿ.
ನಂಜಪ್ಪ	1 / 1881—82	ಜೆಗರ ಹಳ್ಳಿ ಗ್ರಾಮದಲ್ಲಿರುವ ಜೇಯಪ್ಪನ ಮಗ ವೆಂಕಟರಂಗಯ್ಯ	ಜೆಗರಹಳ್ಳಿ ಗ್ರಾಮದಲ್ಲಿ ಇರುವ ಚನ್ನಪ್ಪನ ಮಗ ಬಿದ್ದಲಿಂಗಪ್ಪ	13—10—81	5—6—82	ಜೆಗರಹಳ್ಳಿ ಗ್ರಾಮದ ಕೆರೆಕೆಳಗೆ ನಂಬರು 212—213ನೇ ತರೀಜಮೀನನ್ನು (145) ರೂಪಾಯಿಗೆ ಕ್ರಯಕ್ಕೆ ಕೊಟ್ಟಿರುವದಾಗಿ.

ವಿ. ಪಿ. ಮಾಧವರಾವ್,
ರಿಜಿಸ್ಟ್ರಾರ್.

ಮೈಸೂರು ಸ್ಟೇಟ್ ರೈಲ್ವೆ.

ಪ್ರಕಟನೆ.

ಬೆಂಗಳೂರು—ತುಮಕೂರು ರೈಲ್ವೆ ತೆರಿಯೋಣವು.

ಸ್ ೧೮೮೪ನೇ ಇಸವಿ ಆಗಸ್ಟ್ ತಾರೀಖು 11ನೇ ಲಾಗಾಯ್ತು ಬೆಂಗಳೂರಿಂದ 43 ಮೈಲಿ ದೂರದಲ್ಲಿ ಇರುವ ತುಮಕೂರುವರಿಗೆ ರೈಲ್ವೆ ಭಂಡಿಗಳ ಮೇಲೆ ಪ್ರಯಾಣಸ್ಥರು ಅವರ ಲಗ್ಗೇಜ್, ಕುದುರೆಗಳು, ಭಂಡಿಗಳು, ನಾಯಿಗಳು, ಪಾರಸಲ್‌ಗಳು ಮತ್ತು ಗೂಡ್ಸು ಯಾನೆ ಸಾಮಾನುಗಳು ಮೈಸೂರು ರೈಲ್‌ವೆಯ ತವಾಂ ಸ್ಟೇಷನ್‌ಗಳಿಂದ ಸಾಗಿಸಲ್ಪಡುವವು.

ತುಮಕೂರು ಲೈನಲ್ಲಿ ಇರತಕ್ಕ ಸ್ಟೇಷನ್‌ಗಳು ಯಾವವಂದರೆ:—

ಬೆಂಗಳೂರು, ಬಾಣಾವಾರ, ಗೊಲ್ಲಹಳ್ಳಿ, ದೊಡ್ಡಪಲೆ, ನಿಡವಂಡ, ಹಿರೇಹಳ್ಳಿ, ತುಮಕೂರು.